ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 5, Mar-Apr 2020, 92-98**
**©*IIMRD*, Mysuru**
IIMRD JOURNALS
**www.iimrd.com**

# ಕನ್ನಡ ಕೃಷಿ ಪತ್ರಿಕೋದ್ಯಮ : ಒಂದು ಅವಲೋಕನ

**ಡಾ. ನರಸಿಂಹ [1]**

**ಪೀಠಿಕೆ**

ಮನುಷ್ಯನ ನಾಗರಿಕತೆಯ ಇತಿಹಾಸದಲ್ಲಿ ಬೇಟೆಗಾರಿಕೆ ನಂತರ ಕೃಷಿಯು ಪ್ರಮುಖ ಕಸುಬಾಗಿ ರೂಪುಗೊಂಡಿದೆ. ಋಗ್ವೇದದ ಕಾಲದಿಂದ ಅಂದರೆ ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ ತನ್ನ ಸಾಕು ಪ್ರಾಣಿಗಳೊಂದಿಗೆ ಒಂದು ಕಡೆ ನೆಲೆ ನಿಂತ ಮೇಲೆ ಕೃಷಿಯನ್ನು ಪ್ರಪ್ರಥಮವಾಗಿ ಮಹಿಳೆಯು ಪ್ರಾರಂಭಿಸಿದಳು. ಕಾಡಿನಲ್ಲಿ ಸಂಗ್ರಹಿಸಿ ತಿಂದ ಹಣ್ಣು ಹಂಪಲುಗಳ ಬೀಜವನ್ನು ತಮ್ಮ ಮನೆಯ ಹಿಂದೆ ಮುಂದೆ ಬಿಸಾಡಿ ಅವು ತದ್ರೂಪು ಸಸ್ಯಗಳಾಗಿ ಬೆಳೆದದ್ದೇ ಸಾಗುವಳಿಗೆ ದೊರೆತ ಮೊದಲ ಪ್ರೇರಣೆ ಎನ್ನಲಾಗುತ್ತದೆ. ಭೂಮಿಯ ಸುಲಭ ಉಳುಮೆಗಾಗಿ ಯೋಚಿಸುತ್ತಿದ್ದಾಗ ಮೊದಲು ಕೃಷಿ ಉಪಕರಣವಾಗಿ ಆವಿಷ್ಕಾರಗೊಂಡ ನೇಗಿಲು ಬೇಸಾಯದ ಕ್ರಾಂತಿಗೆ ಕಾರಣವಾಯಿತೆಂದು ಇತಿಹಾಸ ತಜ್ಞರು ಗುರುತಿಸಿದ್ದಾರೆ. ವೇದಗಳ ಕಾಲದಲ್ಲಿ ಒಕ್ಕಲತನವು ಅತ್ಯಂತ ಶಿಸ್ತುಬದ್ಧವಾಗಿ ಸಂರಚನೆಗೊಂಡು ಗೋವು ಎಲ್ಲ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಹೊರಹೊಮ್ಮಿದೆ.

ಕೃಷಿ ಬೆಳವಣಿಗೆಯು ಮಾನವನ ಬೆಳವಣಿಗೆಯ ಜೊತೆ ಜೊತೆಯಲ್ಲಿ ಬೆಳೆದುಬಂದಿದೆ. ಮಾನವನ ಬೌದ್ಧಿಕ ಹಾಗೂ ಆಧುನಿಕತೆ ವಿಕಾಸವಾದಂತೆಲ್ಲಾ ವ್ಯವಸಾಯದ ಚಟುವಟಿಕೆಯಲ್ಲೂ ಬದಲಾವಣೆ ಕಂಡು ಬಂದಿದೆ. ಭಾರತ, ಚೀನಾ, ಮೆಸಪೋಟೆಮಿಯ ಮತ್ತು ಈಜಿಪ್ಟ್ ಮೊದಲಾದ ಪ್ರಾಚೀನ ನಾಗರಿಕತೆಯಲ್ಲಿ ಕೃಷಿಯ ಆಧುನಿಕತೆಯನ್ನು ಕಾಣಬಹುದು.

ಪ್ರಾಚೀನ ನಾಗರಿಕತೆಯ ಇತಿಹಾಸದ ಜೊತೆ ಜೊತೆಗೆ ಕೃಷಿಕರ ಇತಿಹಾಸವೂ ಸೇರಿಕೊಂಡಿದೆ. ಪ್ರಾಚೀನ ಮಾನವನು ವ್ಯವಸಾಯವನ್ನು ಕಂಡುಕೊಂಡ ನಂತರವೇ ವ್ಯವಸಾಯ ಪ್ರದೇಶದ ಹತ್ತಿರ ನೆಲೆ ನಿಂತಿರುವುದು; ಸಂಘಜೀವಿಯಾಗಿ ಬದುಕಿ ನೀತಿ ನಿಯಮಗಳ ಪರಿಧಿಗೆ ಒಳಗಾಗಿರುವುದು ಮತ್ತು ಪ್ರಾಣಿಗಳನ್ನು ಪಳಗಿಸಿಕೊಂಡು ಅವುಗಳ ಸಹಾಯದಿಂದ ಉಳುಮೆಯಲ್ಲಿ ತೊಡಗಿರುವುದು; ಆಹಾರ ಉತ್ಪಾದನೆಯಲ್ಲಿ ಉಂಟಾದ ಪರಿಸ್ಥಿತಿಯು ಹೆಚ್ಚೆಚ್ಚು ಕುಶಲ ಕಲೆಗಾರರನ್ನು ಬೆಳೆಸಲು, ಸಂಸ್ಕೃತಿ ಅರಳಲು ಹಾಗೂ ನಾಗರಿಕತೆಯು ಬೆಳೆಯಲು ಕಾರಣವಾಯಿತು. ಆದ್ದರಿಂದ ಜೀವ ವಿಕಾಸದ ಬೆಳಕಿನಲ್ಲಿ ಮತ್ತು ಮಾನವನ ಭೌತಿಕ ಸಂಸ್ಕೃತಿಯಲ್ಲಿ ಮಾತ್ರ ವ್ಯವಸಾಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

ಮಾನವ ಒಂದು ಕಡೆ ನೆಲೆ ನಿಂತು ತನಗೆ ಬೇಕಾದ ವಸ್ತುಗಳನ್ನು ತಾನೇ ಉತ್ಪಾದನೆ ಮಾಡಿಕೊಳ್ಳಲು ಆರಂಭಿಸಿರುವುದು ಆತನ ಭೌತಿಕ ಅವಶ್ಯಕತೆಯ ಈಡೇರಿಕೆಗೆ ಸಹಕಾರಿಯಾಯಿತು. ಕೃಷಿ

[1] *ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೊಪ್ಪಳ.*

ಮತ್ತು ವಸ್ತುಗಳ ಉತ್ಪಾದನೆಯು ಮಾನವನ ಬದುಕಿಗೆ ತಳಹದಿ ಮಾತ್ರವಲ್ಲದೆ ಆತನ ಸಂದರ್ಭಗಳನ್ನು ನಿರ್ವಹಿಸುವ ಅಂಶವೂ ಆಗಿದೆ. "ಉತ್ಪಾದನಾ ಶಕ್ತಿಗಳು ಹಾಗೂ ಉತ್ಪಾದನಾ ಸಂಬಂಧಗಳಲ್ಲಿ ಕ್ರಮವಾಗಿ ನಡೆಯುವ ಪರಿವರ್ತನೆಗಳನ್ನು ಕಾಲಾನುಕ್ರಮದಲ್ಲಿ ವಿವರಿಸುವುದೇ ಚರಿತ್ರೆ" ಎಂದು ಖ್ಯಾತ ಇತಿಹಾಸಕಾರ ಕೋಸಾಂಬಿಯವರು ವ್ಯಾಖ್ಯಾನಿಸುತ್ತಾರೆ.

**ಭಾರತದಲ್ಲಿ ಕೃಷಿ ಪತ್ರಿಕೋದ್ಯಮದ ಇತಿಹಾಸ ಮತ್ತು ಬೆಳವಣಿಗೆ**

ಮಾಧ್ಯಮಗಳು ಸಮಾಜದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಸಮೂಹ ಮಾಧ್ಯಮಗಳಲ್ಲಿ ಪತ್ರಿಕೆಗಳು ಅಗ್ರಸ್ಥಾನ ಹೊಂದಿದ್ದು, ಓದುಗರಿಗೆ ಜ್ಞಾನಾರ್ಜನೆ, ಮಾಹಿತಿ ಹಾಗೂ ಮನರಂಜನೆಯ ದಾಹವನ್ನು ನಿರಂತರವಾಗಿ ನೀಗಿಸುತ್ತಾ ಬಂದಿವೆ. ಇವು ಸಾಮಾನ್ಯ ಪತ್ರಿಕೆಗಳಿಗಿಂತ ಭಿನ್ನವಾಗಿ ವಿಶೇಷ ಪತ್ರಿಕೆಗಳು ತಮ್ಮದೇ ಆದ ಓದುಗರ ಆಶೋತ್ತರಗಳಿಗೆ ನಿರಂತರವಾಗಿ ಸ್ಪಂದಿಸುತ್ತಾ ಬಂದಿವೆ. ಅಂತಹ ವಿಶೇಷ ಪತ್ರಿಕೆಗಳ ಸಾಲಿನಲ್ಲಿ ಕೃಷಿ ಪತ್ರಿಕೆಗಳು ಸೇರಿವೆ. ಕೃಷಿ ಅಭಿವೃದ್ದಿಯಲ್ಲಿ ಕೃಷಿ ಪತ್ರಿಕೆಗಳು ಮಹತ್ತರ ಪಾತ್ರವಹಿಸುತ್ತಿವೆ. ಹೊಸ ಆವಿಷ್ಕಾರಗಳು, ವಿವಿಧ ಬೆಳೆ ಪದ್ಧತಿಗಳು, ವೈಜ್ಞಾನಿಕ ವಿಚಾರಗಳು, ಗೊಬ್ಬರ, ಕೀಟನಾಶಕಗಳ ಬಗ್ಗೆ ರೈತರಿಗೆ ಕೃಷಿ ಪತ್ರಿಕೆಗಳು ಕೃಷಿ ಅಭಿವೃದ್ಧಿಯ ಮಾಹಿತಿಯನ್ನು ನೀಡುತ್ತಿವೆ. ಕೃಷಿ ಪತ್ರಿಕೋದ್ಯಮವು ಅಭಿವೃದ್ಧಿ ದೇಶಗಳ ಜೊತೆಗೆ ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿಯೂ ಸಹ ತನ್ನದೇ ಆದ ಸ್ಥಾನವನ್ನು ಪಡೆದುಕೊಳ್ಳುತ್ತಿದೆ. ಆಧುನಿಕ ವ್ಯವಸಾಯ ಪದ್ಧತಿಗಳ ಆಗಮನದಿಂದ ಕೃಷಿ ಪತ್ರಿಕೋದ್ಯಮದ ಮಹತ್ವ ಹೆಚ್ಚಾಗಿದೆ. ಜ್ಞಾನ ಮತ್ತು ಕೌಶಲ್ಯಗಳ ವರ್ಗಾವಣೆಯೇ ಕೃಷಿ ಪತ್ರಿಕೋದ್ಯಮದ ಮೂಲ ಉದ್ದೇಶವಾಗಿದೆ. ಸಾಮಾನ್ಯವಾಗಿ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ, ನೀರಾವರಿ ಮತ್ತು ಸಹಕಾರ ಇವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಣೆ ಮಾಡುವ ಪತ್ರಿಕೆ ಅಥವ ನಿಯತಕಾಲಿಕೆಗಳಿಗೆ ಕೃಷಿ ಪತ್ರಿಕೆಗಳು ಎಂದು ವ್ಯಾಖ್ಯಾನಿಸಬಹುದಾಗಿದೆ.

**ಕೃಷಿ ಪತ್ರಿಕೋದ್ಯಮದ ಹಿನ್ನಲೆ**

ವಿಶ್ವದ ಮೊಟ್ಟಮೊದಲ ಕೃಷಿ ಪತ್ರಿಕೆ *'ಅಗ್ರಿಕಲ್ಚರ್ ದ ಫ್ರಾನ್ಸ್'* ಫ್ರಾನ್ಸ್‌ನ ಪ್ಯಾರಿಸ್ಸಿನಲ್ಲಿ 1763ರಲ್ಲಿ ಪ್ರಕಟವಾಯಿತು. ಅನಂತರ 1840 ರಲ್ಲಿ ಉತ್ತರ ಅಮೇರಿಕಾದಲ್ಲಿ *'ಸೆನ್ಸಸ್ ಅಗ್ರಿಕಲ್ಚರ್'* ಪತ್ರಿಕೆ ಪ್ರಕಟವಾಯಿತು. ಇಂಗ್ಲಿಷ್ ಕೃಷಿ ಸಾಹಿತ್ಯ 19ನೇ ಶತಮಾನದಲ್ಲಿ ಹೆಚ್ಚಾಗಿ ಪ್ರಕಟವಾಗಲು ಪ್ರಾರಂಭವಾಯಿತು. ಮೊದಮೊದಲು ಕಡಿಮೆಯಿದ್ದರೂ 19ನೇ ಶತಮಾನದ ಅಂತ್ಯದ ವೇಳೆಗೆ ಜಾಗತಿಕ ಕೃಷಿ ಪದ್ಧತಿಗಳಲ್ಲಿ ಬದಲಾವಣೆಗಳಾದಂತೆ ಹೆಚ್ಚು ಸಾಹಿತ್ಯ ಪ್ರಕಟವಾಗಲಾರಂಭಿಸಿತು. ಇದರ ಜೊತೆಗೆ ವಿಶ್ವ ಕೃಷಿ ಪತ್ರಿಕೋದ್ಯಮವು ಸಹ ಹೆಚ್ಚು ಬೆಳೆಯಲಾರಂಭಿಸಿತು. ಇಂದು ಪ್ರಪಂಚದಲ್ಲಿ 28,000 ಕೃಷಿ ಪತ್ರಿಕೆಗಳು ಇವೆ. ಹಾಗೆಯೇ ಭಾರತದಲ್ಲಿ ಸಹ ಸುಮಾರು 800 ಕೃಷಿ ಪತ್ರಿಕೆಗಳು ಪ್ರಕಟವಾಗುತ್ತಿವೆ.

ಕೃಷಿಗೆ ಸಂಬಂಧಿಸಿದ ಕೆಲವು ಕೃಷಿ ಪತ್ರಿಕೆಗಳನ್ನು ಸರಕಾರದ ಸಂಸ್ಥೆಗಳು ಕೂಡ ಪ್ರಕಟಿಸುತ್ತಿವೆ. ಅವುಗಳೆಂದರೆ ಕಾಫಿ ಬೋರ್ಡ್, ಸ್ಪೈಸ್ ಬೋರ್ಡ್, ರಬ್ಬರ್ ಬೋರ್ಡ್, ಕೊಕನಾಟ್ ಡೆವಲಪ್‌ಮೆಂಟ್ ಬೋರ್ಡ್, ಸೆಂಟ್ರಲ್ ಸಿಲ್ಕ್ ಬೋರ್ಡ್, ಟೀ ಬೋರ್ಡ್ ಹಾಗೂ ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್

ಇತ್ಯಾದಿ. ಇವುಗಳಲ್ಲಿ ಸ್ಪೈಸ್ ಬೋರ್ಡ್, ರಬ್ಬರ್ ಬೋರ್ಡ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೃಷಿ ಪತ್ರಿಕೆಗಳನ್ನು ಪ್ರಕಟಿಸುತ್ತಿವೆ.

ದೇಶದಲ್ಲಿ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆಗಳು ಕೂಡ ಕೃಷಿ ಪತ್ರಿಕೆಗಳನ್ನು ಪ್ರಕಟಿಸುತ್ತಿವೆ. ಆ ಸಂಸ್ಥೆಗಳೆಂದರೆ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರೀಸರ್ಚ್, ಸೆಂಟ್ರಲ್ ಪ್ಲಾಂಟೇಷನ್ ಕ್ರಾಪ್ಸ್ ರೀಸರ್ಚ್ ಇನ್ಸ್‌ಟಿಟ್ಯೂಟ್, ಡೈರಕ್ಟೊರೇಟ್ ಆಫ್ ಟೊಬಾಕೋ ಡೆವಲಪ್‌ಮೆಂಟ್, ಸೆಂಟ್ರಲ್ ಪೊಟಾಟೊ ರೀಸರ್ಚ್ ಇನ್ಸ್‌ಟಿಟ್ಯೂಟ್, ಡೈರಕ್ಟೊರೇಟ್ ಆಫ್ ಕೋಕಾ ಆರೆಕ್ ಅಂಡ್ ಸ್ಪೈಸ್ ಡೆವಲಪ್‌ಮೆಂಟ್, ಕೇರಳ ಹಾರ್ಟಿಕಲ್ಚರ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಹಾಗೂ ಡೈರೆಕ್ಟರೇಟ್ ಆಫ್ ಕ್ಯಾಶ್‌ನಟ್ ಅಂಡ್ ಕೋಕಾ ಡೆವಲಪ್‌ಮೆಂಟ್ ಇತ್ಯಾದಿ. ಈ ಎಲ್ಲಾ ಕೃಷಿ ಪತ್ರಿಕೆಗಳಲ್ಲಿ ಬಹುತೇಕ ಹೆಚ್ಚು ಕೃಷಿ ತಂತ್ರಜ್ಞಾನ ಮತ್ತು ಸಂಶೋಧನೆಗೆ ಸಂಬಂಧ ಪಟ್ಟ ಲೇಖನಗಳನ್ನು ಪ್ರಕಟಿಸಲಾಗುತ್ತದೆ.

ಸರಕಾರೇತರ ಸಂಸ್ಥೆಗಳು ಮತ್ತು ವೇದಿಕೆಗಳು ಕೂಡ ಕೃಷಿಗೆ ಸಂಬಂಧಿಸಿದ ಕೃಷಿ ಪತ್ರಿಕೆಗಳನ್ನು ಪ್ರಕಟಿಸುತ್ತವೆ. ಅವುಗಳೆಂದರೆ ಆಲ್ ಇಂಡಿಯಾ ರೈಸ್ ಎಕ್ಸ್‌ಪೋರ್ಟ್ಸ್ ಅಸೋಸಿಯೇಷನ್, ಇಂಡಿಯಾ ಸೊಸೈಟಿ ಫಾರ್ ಕಾಟನ್ ಇಂಪ್ರೂವ್‌ಮೆಂಟ್, ಆಲ್ ಇಂಡಿಯಾ ಭೀ ಕೀಪರ್ಸ್ ಅಸೋಸಿಯೇಷನ್ ಮತ್ತು ಆಲ್ ಇಂಡಿಯಾ ಅರೆಕಾ ಗ್ರೋವರ್ಸ್ ಅಸೋಸಿಯೇಷನ್. ಇತ್ತೀಚಿಗೆ ಖಾಸಗಿ ಸಂಸ್ಥೆಗಳು ಕೂಡ ಬಹಳ ವ್ಯವಸ್ಥಿತವಾಗಿ ಕೃಷಿ ಪತ್ರಿಕೆಗಳನ್ನು ಹೊರತರುತ್ತಿದ್ದಾರೆ. (ಶ್ಯಾಂಪ್ರಸಾದ್ ,2005).

ಇಂದು ಕೃಷಿ ಪತ್ರಿಕೋದ್ಯಮವು ಕೃಷಿ ವಿಸ್ತರಣಾ ಕಾರ್ಯಕ್ರಮದ ಒಂದು ಭಾಗವಾಗಿ ಬೆಳೆದಿದೆ. ಕೃಷಿ ಪತ್ರಿಕೋದ್ಯಮದ ಬೆಳವಣಿಗೆ ಮುಖ್ಯವಾಗಿ ಕಾರಣವಾದದ್ದು ಜ್ಞಾನ ಮತ್ತು ಕೌಶಲ್ಯದ ವರ್ಗಾವಣೆ. ಆದರೆ ಕೃಷಿ ವಿಸ್ತರಣೆ ಮತ್ತು ಪತ್ರಿಕೋದ್ಯಮದ ನಡುವಿನ ಐಕ್ಯತೆಯ ಕೊರತೆಯಿಂದಾಗಿ ಅನೇಕ ವರ್ಷಗಳವರೆಗೂ ಕೃಷಿ ಪತ್ರಿಕೋದ್ಯಮ ನಿಂತ ನೀರಿನಂತಾಗಿತ್ತು. ಭಾರತದಲ್ಲಿ ಕೃಷಿಗೆ ಪ್ರಾಮುಖ್ಯತೆ ಹೆಚ್ಚಿದಂತೆ ಕೃಷಿ ಸಂವಹನಕ್ಕೆ ದಾರಿ ಮಾಡಿಕೊಟ್ಟಿತು.

ಕೃಷಿ ಪತ್ರಿಕೋದ್ಯಮವು ಭಾರತದಲ್ಲಿ ಎರಡು ರೀತಿಯಲ್ಲಿರುವುದನ್ನು ನಾವು ಕಾಣಬಹುದು. ಮೊದಲನೆಯದು ಕೃಷಿಗಾಗಿಯೇ ಇರುವ 'ನಿಯತಕಾಲಿಕೆಗಳು'; ಎರಡನೆಯದು ಮುಖ್ಯವಾಹಿನಿ ದಿನಪತ್ರಿಕೆಗಳು ಹೊರತರುವ ಕೃಷಿ ಸಾಪ್ತಾಹಿಕಗಳು. ಇಂದು ದೇಶದಲ್ಲಿ ಸುಮಾರು 800 ಕ್ಕಿಂತ ಹೆಚ್ಚು ಕೃಷಿಗೆ ಸೀಮಿತವಾದ ನಿಯತಕಾಲಿಕೆಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳು, ರೈತರ ಸಂಘ–ಸಂಸ್ಥೆಗಳು ಮತ್ತು ಕೃಷಿ ಸಂಶೋಧನಾ ಸಂಸ್ಥೆಗಳು ಹೊರತರುತ್ತಿವೆ. ಎರಡರಲ್ಲೂ ಸಾಮ್ಯತೆಯೆಂದರೆ ಇವುಗಳಲ್ಲಿ ಬರೆಯುವವರು ವಿಜ್ಞಾನಿಗಳು, ಸಂಬಂಧಿಸಿದ ಸಂಸ್ಥೆಗಳ ಮುಖ್ಯಸ್ಥರು ಮತ್ತು ಕೃಷಿ ತಂತ್ರಜ್ಞರುಗಳಾಗಿದ್ದಾರೆ. ಇವರು ಒಂದಲ್ಲ ಒಂದು ವಿಧದಲ್ಲಿ ಸರಕಾರದ ನಿಯಂತ್ರಣದಲ್ಲಿರುತ್ತಾರೆ. ಇವುಗಳಲ್ಲಿ ಬರುವ ವಿಷಯಗಳು ಶೈಕ್ಷಣಿಕವಾಗಿರುತ್ತವೆ. ಆದರೆ ಯಾರಿಗಾಗಿ ಇವುಗಳನ್ನು ಹೊರತರಲಾಗುತ್ತದೆಯೋ ಅವರುಗಳ ಮಾಹಿತಿಯ ದಾಹವನ್ನು ತಣಿಸುವಲ್ಲಿ ಇವುಗಳ ಸಫಲತೆಯ ಪ್ರಮಾಣ ತುಂಬಾ ಕಡಿಮೆ ಎನ್ನಬಹುದು.

ಭಾರತದಲ್ಲಿ ಕೃಷಿ ಪತ್ರಿಕೋದ್ಯಮದ ಬೆಳವಣಿಗೆಯನ್ನು ಅವಲೋಕಿಸಿದಾಗ 'ಭಾರತೀಯ ಕೃಷಿ

ಅನುಸಂಧಾನ ಪರಿಷತ್', ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರದ ಇಲಾಖೆಗಳು ಹೊರತರುವ ಕೃಷಿ ನಿಯತಕಾಲಿಕಗಳು ಕೃಷಿ ವಿಸ್ತರಣಾ ದೃಷ್ಟಿಯನ್ನು ಹೊಂದಿದ್ದು ಇವುಗಳು ಸಂಶೋಧನೆಯಿಂದ ಹೊರಬರುವ ಅಂಕಿ ಅಂಶಗಳನ್ನು ಹೊತ್ತು ತರುವುದರ ಜೊತೆಗೆ ಏಕಮುಖ ಸಂವಹನವನ್ನು ಮಾತ್ರ ಒಳಗೊಂಡಿದ್ದವು. ಈ ಕೃಷಿ ಪತ್ರಿಕೆಗಳಲ್ಲಿ ಓದುಗರ ಅಥವಾ ರೈತರ ಪ್ರತಿಕ್ರಿಯೆಗೆ ಅವಕಾಶ ತುಂಬಾ ಕಡಿಮೆ ಇರುತ್ತದೆ. ಇಂದಿಗೂ ಇಂತಹ ನಿಯತಕಾಲಿಕೆಗಳಲ್ಲಿ ಬಳಸಲಾಗುವ ವೈಜ್ಞಾನಿಕ ಮತ್ತು ತಾಂತ್ರಿಕ ಪದಗಳನ್ನು ಅರ್ಥ ಮಾಡಿಕೊಳ್ಳುವುದಂತೂ ಕ್ಲಿಷ್ಟಕರ ಸಂಗತಿಯೇ ಆಗಿದೆ. ಮುಖ್ಯವಾಗಿ ರೈತರ ಸಹಭಾಗಿತ್ವಕ್ಕೆ ಅವಕಾಶ ಕಡಿಮೆ ಇರುತ್ತದೆ. ಈ ರೀತಿಯ ನಿಯತಕಾಲಿಕೆಗಳಿಗೆ ರೈತರಿಂದ ಪ್ರತಿಕ್ರಿಯೆಗಳು ಬರುವುದು ತುಂಬಾ ವಿರಳ. ಈ ನಿಯತಕಾಲಿಕೆಗಳಲ್ಲಿ ಬಳಸುವ ಭಾಷೆ ಮತ್ತು ವಾಖ್ಯಾನಗಳು ಅದರಲ್ಲೂ ಹೆಚ್ಚಾಗಿ ತಾಂತ್ರಿಕ ಪದಗಳನ್ನು ಉಪಯೋಗಿಸುವುದರಿಂದ ಇಂತಹ ನಿಯತಕಾಲಿಕೆಗಳು ರೈತ ಸಮುದಾಯಕ್ಕೆ ಅರ್ಥವಾಗುವುದು ತಂಬಾ ಕಷ್ಟಕರವಾಗುತ್ತವೆ.

ಕೃಷಿ ಪತ್ರಿಕೋದ್ಯಮವು ಕೃಷಿ ಅಭಿವೃದ್ಧಿಗೆ ನೀಡಿರುವ ಕೊಡುಗೆ ಮಹತ್ತರವಾದುದು. ಕನ್ನಡ ಕೃಷಿ ಪತ್ರಿಕೋದ್ಯಮದ ವಿಶಿಷ್ಟತೆಯನ್ನು ಮತ್ತು ಅದರ ಕೊಡುಗೆಗಳನ್ನು ದಾಖಲಿಸುವುದು ಪ್ರಸ್ತುತ ಅಧ್ಯಯನದ ಪ್ರಧಾನ ಅಶಯವಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದಂತೆ ಭಾರತದಲ್ಲಿ ಕೃಷಿ ಹೆಚ್ಚಾಗಿ ಬೆಳೆಯಿತು. ಇದರ ಜೊತೆಗೆ ಕೃಷಿ ಪತ್ರಿಕೋದ್ಯಮ ಸಹ ಬೆಳೆಯುತ್ತಿದೆ. ಕನ್ನಡ ಕೃಷಿ ಪತ್ರಿಕೋದ್ಯಮದ ಭಿನ್ನತೆ ಮತ್ತು ಬದಲಾವಣೆಗಳನ್ನು ವಿಶ್ಲೇಷಿಸುವುದು ಇಂದಿನ ಕನ್ನಡ ಕೃಷಿ ಪತ್ರಿಕೋದ್ಯಮದ ಪ್ರಮುಖ ಕಾರ್ಯವಾಗಿದೆ.

**ಅಧ್ಯಯನದ ಉದ್ದೇಶಗಳು**

ಪ್ರಸ್ತುತ ಸಂಶೋಧನೆಯಲ್ಲಿ ಕರ್ನಾಟಕದಲ್ಲಿನ ಕನ್ನಡ ಕೃಷಿ ಪತ್ರಿಕೆಗಳ ಹುಟ್ಟು, ಬೆಳವಣಿಗೆ, ವಸ್ತು ವಿಷಯ, ಪರಿಣಾಮ, ಸವಾಲುಗಳು ಹಾಗು ಅವುಗಳ ವಿಶೇಷ ಲಕ್ಷಣಗಳನ್ನು ವಿಶ್ಲೇಷಿಸುವುದೇ ಮೂಲ ಉದ್ದೇಶವಾಗಿದೆ.

**ಅಧ್ಯಯನದ ನಿರ್ದಿಷ್ಟ ಉದ್ದೇಶಗಳು**

- ಪತ್ರಿಕೆಗಳ ವಸ್ತುನಿಷ್ಠತೆ ಮತ್ತು ವಸ್ತು ವಿಷಯಗಳನ್ನು ಪರಿಶೀಲಿಸುವುದು.
- ಕೃಷಿ ಪತ್ರಿಕೆಗಳು ಎದುರಿಸುತ್ತಿರುವ ಸವಾಲುಗಳನ್ನು ಗುರುತಿಸುವುದು.
- ಕೃಷಿ ಪತ್ರಿಕೆಗಳು ರೈತರ ಮೇಲೆ ಬೀರುವ ಪರಿಣಾಮಗಳನ್ನು ಪರಾಮರ್ಶಿಸುವುದು.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಸಂಶೋಧನೆಯನ್ನು ಐತಿಹಾಸಿಕ (Historical) ಮತ್ತು ವಸ್ತು ವಿಷಯ ವಿಶ್ಲೇಷಣೆ (Content Analysis) ವಿನ್ಯಾಸವನ್ನು ಆಧರಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಈ ಅಧ್ಯಯನಕ್ಕಾಗಿ 2011 ಮತ್ತು 2012ರ ಕೃಷಿಪತ್ರಿಕೆಗಳ ವಿವಿಧ ಸಂಚಿಕೆಗಳನ್ನು ಆಯಾ ಕೃಷಿ ಪತ್ರಿಕೆಯ ಕಛೇರಿಗಳಿಂದ

ಸಂಗ್ರಹಿಸಲಾಗಿದೆ. ವಸ್ತು ವಿಷಯ ವಿಶ್ಲೇಷಣೆಗಾಗಿ ಕೃಷಿ ಪತ್ರಿಕೆಗಳ ಸಂಚಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಸರಳ ಯಾದೃಚ್ಛಿಕ ನಮೂನೆ (Simple Random Sample) ವಿಧಾನವನ್ನು ಬಳಸಲಾಗಿದೆ. ಆಯ್ದ ಕೃಷಿ ಪತ್ರಿಕೆಗಳನ್ನು ವಸ್ತು ವಿಷಯ ವಿಶ್ಲೇಷಣೆ (Content Analysis) ಸಂಶೋಧನಾ ವಿಧಾನದ ಮೂಲಕ ಮಾಹಿತಿ ವಿಶ್ಲೇಷಣೆಗೆ ಒಳಪಡಿಸಲಾಯಿತು.

**ಫಲಿತಾಂಶಗಳು**

ರಾಷ್ಟ್ರಮಟ್ಟದ ಪ್ರಮುಖ ಇಂಗ್ಲಿಷ್ ದಿನಪತ್ರಿಕೆಗಳು ಕೃಷಿಯನ್ನು ಇಂದಿಗೂ ನಿರ್ಲಕ್ಷಿಸುತ್ತಾ ಬಂದಿವೆ. ಅಪರೂಪಕೊಮ್ಮೆ ಕೃಷಿಗೆ ಸಂಬಂಧಿಸಿದ ಸುದ್ದಿಗಳು ಪ್ರಕಟವಾದರೂ ಅವುಗಳು ಏಕಮುಖವಾಗಿರುತ್ತವೆ. ಈ ನಿರ್ಲಕ್ಷ್ಯಗಳ ಮಧ್ಯೆಯೂ ಕೆಲವೊಂದು ಪತ್ರಿಕೆಗಳು ಮತ್ತು ಪತ್ರಕರ್ತರು ಕೃಷಿ ಪತ್ರಿಕೋದ್ಯಮಕ್ಕೆ ಒತ್ತು ಕೊಟ್ಟು ಅನೇಕ ಪ್ರಯೋಗಗಳನ್ನು ಭಾರತದಲ್ಲಿ ಮಾಡಿದ್ದಾರೆ ಎಂಬುದು ಸಮಾಧಾನಕರ ಅಂಶ.

ಇಂಗ್ಲಿಷ್ ಪತ್ರಿಕೆಗಳ ಪೈಕಿ ಹಿಂದುಸ್ಥಾನ್ ಟೈಮ್ಸ್‌ನ ಸಂಪಾದಕರಾಗಿದ್ದ 'ಬಿ ಜಿ. ವರ್ಗಿಸ್' ನಡೆಸಿದ 'ನಮ್ಮ ಹಳ್ಳಿ ಛತೇರ' ಪರಿಣಾಮಕಾರಿ ಪ್ರಯೋಗ ಎಂದು ಹೇಳಬಹುದು. ಅವರು ಹರಿಯಾಣ ರಾಜ್ಯದ ಅತೀ ಸಣ್ಣ 'ಛತೇರ' ಎಂಬ ಹಳ್ಳಿಯನ್ನು ಈ ಪ್ರಯೋಗಕ್ಕೆ ಆಯ್ಕೆ ಮಾಡಿಕೊಂಡು ಗ್ರಾಮೀಣ ಜನರ ಸಮಸ್ಯೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕೆ ಪ್ರಾರಂಭ ಮಾಡಿದರು. ಪ್ರವಾಹ ಬಂದಾಗ ಶೇ. 80.00ರಷ್ಟು ಮುಳುಗಿ ಹೋಗುತ್ತಿದ್ದ 'ಛತೇರ' ಕುರಿತು ಅಲ್ಲಿನ ಜನರ ಸಮಸ್ಯೆಗಳಾದ ಆರೋಗ್ಯ, ಶುಚಿತ್ವ ಮತ್ತು ಮೂಲಭೂತ ಸೌಕರ್ಯಗಳ ಕೊರತೆಗಳ ಕುರಿತು ನಿರಂತರವಾಗಿ ಸುದ್ದಿಗಳನ್ನು ಪ್ರಕಟಿಸುವುದರ ಮೂಲಕ ಒಂದು ಮಾದರಿ ಗ್ರಾಮವಾಗಿ ಪರಿವರ್ತನೆಯಾಗಲು ಸಹಕಾರಿಯಾಯಿತು. ನಮ್ಮ ಹಳ್ಳಿ 'ಛತೇರ' ಮೊದಲ ಕಂತು 'ಹಿಂದುಸ್ಥಾನ್ ಟೈಮ್ಸ್'ನಲ್ಲಿ ಫೆಬ್ರವರಿ 23, 1969 ರಂದು ಪ್ರಕಟವಾಯಿತು. ಪತ್ರಿಕೆಗಳು ಬದಲಾವಣೆಯ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತವೆ ಎಂಬುದಕ್ಕೆ ಇದೊಂದು ದೇಶದಲ್ಲಿ ಅತ್ಯುತ್ತಮ ನಿದರ್ಶನವಾಗಿದೆ. ಅಭಿವೃದ್ಧಿ ವರದಿಗಾರಿಕೆ ಕ್ಷೇತ್ರದಲ್ಲಿ ಇದೊಂದು ಯಶಸ್ವಿ ವಿನೂತನ ಪ್ರಯೋಗವಾಗಿದೆ.

ಇದೇ ರೀತಿ ಕನ್ನಡದಲ್ಲಿ ಉದಯವಾಣಿ ದಿನ ಪತ್ರಿಕೆ ಸಂಪಾದರಾಗಿದ್ದ ಈಶ್ವರ ದೈತೋಟ 1981 ರಲ್ಲಿ 'ಕುಗ್ರಾಮ ಗುರುತಿಸಿ' ಎಂಬ ಪ್ರಯೋಗವೊಂದನ್ನು ಮಾಡಿದರು. ತಾನು ಪ್ರಾರಂಭಿಸಿರುವ ಈ ಪ್ರಯೋಗದ ಕುರಿತು ಜನವರಿ 2, 1980ರ ಸಂಚಿಕೆಯಲ್ಲಿ ಜಾಹಿರಾತು ನೀಡಿ ಪ್ರಯೋಗದ ಉದ್ದೇಶಗಳನ್ನು ತಿಳಿಸಿ ತನ್ನ ಓದುಗರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀರಾ ಹಿಂದುಳಿದ ಹಳ್ಳಿಗಳ ಬಗ್ಗೆ ವಿವರಣೆ ಕೊಡುವಂತೆ ಕೋರಿತು. ಹೀಗೆ ಸರಿಯಾದ ಮತ್ತು ಬಹಳ ಹಿಂದುಳಿದ ಹಳ್ಳಿಗಳನ್ನು ಗುರುತಿಸಿದವರಿಗೆ ಬಹುಮಾನ ನೀಡುವುದಾಗಿಯೂ ಅದು ಘೋಷಿಸಿತು. ಓದುಗರಿಂದ ಗುರುತಿಸಲಾದ ಒಟ್ಟು ಹಳ್ಳಿಗಳಲ್ಲಿ 10 ಹಳ್ಳಿಗಳನ್ನು ಪ್ರಯೋಗಕ್ಕೆ ಆರಿಸಿಕೊಳ್ಳಲಾಯಿತು.

ಹಳ್ಳಿಗಳಿಗೆ ಸಂಬಂಧಿಸಿದ ಅಂಕಣಗಳು ಹಾಗೂ ವರದಿಗಳನ್ನು ಪ್ರಕಟಿಸುವುದಕ್ಕಾಗಿ ಯಾವುದೇ ನಿರ್ದಿಷ್ಟ ದಿನ ಅಥವಾ ಪುಟ ಇರಲಿಲ್ಲ. ಇದಕ್ಕಾಗಿ ಎಲ್ಲಾ ಪುಟಗಳನ್ನು ಉಪಯೋಗಿಸಿಕೊಂಡ ಉದಯವಾಣಿ ಮುಖಪುಟ ಲೇಖನಗಳು, ನುಡಿಚಿತ್ರಗಳು, ಹಳ್ಳಿಗರಿಂದ ಬರುವ ಪ್ರತಿಕ್ರಿಯೆಗಳು ಹಾಗೂ

ದೂರುಗಳು ಅಲ್ಲದೆ ಯಶಸ್ವಿ ಮಾದರಿ ಸುದ್ದಿಗಳನ್ನು ಪ್ರಕಟಿಸುತ್ತಿತ್ತು. ಈ ಹತ್ತು ಹಳ್ಳಿಗಳ ಎಲ್ಲಾ ಸಮಸ್ಯೆಗಳು ಮತ್ತು ಚಟುವಟಿಕೆಗಳನ್ನು ಸವಿಸ್ತಾರವಾಗಿ ಮೊದಲ ವರ್ಷ ಎಡೆಬಿಡದೆ ಪತ್ರಿಕೆಯಲ್ಲಿ ಪ್ರಕಟಿಸಲಾಯಿತು. ಈ ಯೋಜನೆಗಳಿಂದಾಗಿ ಹಳ್ಳಿಗಳ ರಸ್ತೆ, ಒಳಚರಂಡಿ, ಆಸ್ಪತ್ರೆ ಮತ್ತು ಸಾರಿಗೆ ಹೀಗೆ ಅಗತ್ಯ ಮೂಲಸೌಕರ್ಯಗಳನ್ನೆಲ್ಲಾ ಪಡೆಯುವಂತಾಯಿತು.

ಕೃಷಿ ಪತ್ರಿಕೆಗಳ ಮೂಲಕ ಪ್ರಕಟವಾದ ವರದಿಗಳನ್ನು ಓದಿದ ರೈತರು ಕೃಷಿಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಳ್ಳವಲ್ಲಿಯೂ ಸಹ ಮುಂದಾಗಿದ್ದಾರೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ, ಮಿಶ್ರ ಬೆಳೆ, ಕಡಿಮೆ ಖರ್ಚಿನಲ್ಲಿ ಬೆಳೆ ಬೆಳೆಯವುದು, ಸಾವಯವ ಗೊಬ್ಬರ ತಯಾರಿಕೆ, ನೇರ ಮಾರುಕಟ್ಟೆ ಇವುಗಳನ್ನು ಅಳವಡಿಸಿಕೊಂಡಿದ್ದಾರೆ. ಬೆಳೆಯಲ್ಲಿ ಕಟಾವಿಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ತಿಳಿದುಕೊಂಡಿದ್ದಾರೆ. ರೈತರು ಹೈಬ್ರಿಡ್ ಬೀಜಗಳ ಬಳಕೆ, ಪವರ್ ಟಿಲ್ಲರ್‌ಗಳ ಬಳಕೆ, ಮಣ್ಣು ಪರೀಕ್ಷೆಯಂತಹ ತಂತ್ರಜ್ಞಾನಗಳನ್ನು ಕೃಷಿಯಲ್ಲಿ ಅಳವಡಿಸಿಕೊಂಡಿದ್ದಾರೆ.

ಕೃಷಿ ಪತ್ರಿಕೆಗಳು ಸ್ಥಳಿಯ ಕೃಷಿಗೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಿರುವುದರಿಂದ ರಾಜ್ಯಾದ್ಯಂತ ಪತ್ರಿಕೆಗಳು ಹರಡಲು ಕಷ್ಟವಾಗುತ್ತಿವೆ. ಏಕೆಂದರೆ ರಾಜ್ಯದ ಕೃಷಿ ವಿಧಾನದಲ್ಲಿ ವಿಭಿನ್ನತೆಯಿದ್ದು, ಕೆಲವು ಸಂದರ್ಭಗಳಲ್ಲಿ ಕೃಷಿ ಪತ್ರಿಕೆಗಳಲ್ಲಿ ವಿವರಿಸಿರುವ ಕೆಲವು ಕೃಷಿ ಪದ್ಧತಿ ಅಥವಾ ಕೆಲವು ವಿಧಾನಗಳನ್ನು ಲೇಖಕರು ರೈತರ ಹೊಲಗದ್ದೆಗಳಲ್ಲಿ ಪರೀಕ್ಷಿಸಿರುವುದಿಲ್ಲ. ಬಹುಪಾಲು ಲೇಖಕರಿಗೆ ಕೃಷಿ ಅಥವಾ ಗ್ರಾಮೀಣ ಬದುಕಿನ ಅನುಭವವೇ ಇರುವುದಿಲ್ಲ. ತಾವು ತಿಳಿದಿರುವುದು ಹಾಗೂ ಬರೆದಿರುವುದೇ ಸರಿ ಎಂಬ ಮನೋಭಾವನೆ ಲೇಖನಗಳಲ್ಲಿ ಇರುತ್ತದೆ.

ದೈನಿಕಗಳಲ್ಲಿ ಕೃಷಿ ಲೇಖಕರು ಮತ್ತು ಕೃಷಿಗೆ ಪ್ರತ್ಯೇಕವಾದ ವರದಿಗಾರರು ಮತ್ತು ಕೃಷಿಪರ ಸುದ್ದಿಗಳನ್ನು ಬರೆಯಲು ಪ್ರತ್ಯೇಕವಾದ ಪತ್ರಕರ್ತರು ಇಲ್ಲ. ಕೃಷಿ ವಿಶ್ವವಿದ್ಯಾನಿಲಯದ ತಜ್ಞರ ಹಾಗು ಹವ್ಯಾಸಿ ಬರಹಗಾರರ ಲೇಖನಗಳು ದೈನಿಕ ಕೃಷಿ ಪುಟಗಳಲ್ಲಿ ಪ್ರಕಟವಾಗುತ್ತವೆ. ರೈತರು ಹೆಚ್ಚಾಗಿ ದೈನಿಕ ಮತ್ತು ಕೃಷಿ ಪತ್ರಿಕೆಗಳನ್ನು ಓದಿ ಅವುಗಳಲ್ಲಿರುವ ಸಲಹೆಗಳನ್ನು ಪಡೆದು ತನ್ನ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

ಪ್ರಸ್ತುತ ಪತ್ರಿಕೆಗಳು ಎದುರಿಸುತ್ತಿರುವ ಬಹು ದೊಡ್ಡ ಸವಾಲು ಎಂದರೆ ಓದುಗರ ಮತ್ತು ಜಾಹಿರಾತು ಸಮಸ್ಯೆಯಾಗಿದೆ. ಕೃಷಿಗೆ ಮೀಸಲಾದ ಪತ್ರಿಕೆಗಳು ಹೆಚ್ಚಾಗಿ ಕೃಷಿಕರನ್ನು ಅವಲಂಭಿಸಿವೆ. ಆದರೆ ಶೇ. 75.0ರಷ್ಟು ರೈತರು ಅನಕ್ಷರಸ್ಥರು. ಆದ್ದರಿಂದ ಪತ್ರಿಕೆ ಓದುಗರ ಸಂಖ್ಯೆ ತುಂಬ ಕಡಿಮೆ ಇದೆ.

ಪತ್ರಿಕೆಗಳಲ್ಲಿ ಹವ್ಯಾಸಿ ಬರಹಗಾರರ ಪಾತ್ರ ಹೆಚ್ಚು ಇದೆ. ಪತ್ರಿಕೆಗೆ ನಿವೃತ್ತ ಉಪನ್ಯಾಸಕರು, ಹವ್ಯಾಸಿ ಬರಹಗಾರರು ಲೇಖನಗಳು ಬರೆಯುತ್ತಾರೆ. ಕೃಷಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪತ್ರಿಕೆಗಳಲ್ಲಿ ಕೃಷಿ ತಜ್ಞರು, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಮತ್ತು ವಿಸ್ತರಣಾ ಅಧಿಕಾರಿಗಳು ಕೃಷಿ ಬಿಕ್ಕಟ್ಟುಗಳ ಬಗ್ಗೆ ಪ್ರತಿ ತಿಂಗಳು ಲೇಖನಗಳ ಮೂಲಕ ಪರಿಹಾರಗಳನ್ನು ಪತ್ರಿಕೆಗಳ ಮೂಲಕ ತಿಳಿಸುತ್ತಿದ್ದಾರೆ.

ಪ್ರತಿಬಿಂಬ IIMRD JOURNALS
PRATIBIMBA – Multidisciplinary Kannada Research Journal of IIMRD

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದಿಂದ 1991 ರ ನಂತರ ಕೃಷಿಕ್ಷೇತ್ರ ತತ್ತರಿಸಿಬಿಟ್ಟಿದೆ. ಆದರೆ ಕೃಷಿ ಪತ್ರಿಕೆಗಳು ಇದರ ಪರಿಣಾಮಗಳ ಬಗ್ಗೆ ರೈತರಿಗೆ ಮತ್ತು ಇದರಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ಇವುಗಳ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿಲ್ಲ.

**ಉಪಸಂಹಾರ**

ಮೇಲಿನ ಅಂಶಗಳನ್ನು ಗಮನಿಸಿದಾಗ ಕೃಷಿ ಮತ್ತು ಕೃಷಿಸಂಬಂಧಿಸಿದ ನಿಯತಕಾಲಿಕೆಗಳನ್ನು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಪ್ರಕಟಿಸುತ್ತಿದ್ದು, ರೈತರಿಗೆ ಅನೇಕ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತಿವೆ. ದೈನಿಕ ಪತ್ರಿಕೆಗಳು ಕೂಡ ರೈತರಿಗೆ ಅನುಕೂಲವಾಗುವ ಮಾಹಿತಿಯನ್ನು ಪ್ರಕಟಿಸಿದರೂ ಕೂಡ ನಿರೀಕ್ಷಿತ ಮಟ್ಟದಲ್ಲಿ ರೈತರನ್ನು ತಲುಪುತ್ತಿಲ್ಲ ಎಂಬ ಅಂಶವನ್ನು ಪ್ರಸ್ತುತ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ. ಇದಕ್ಕೆ ಪ್ರಮುಖ ಕಾರಣ ಕೃಷಿಕರ ಅನಕ್ಷರತೆ ಮತ್ತು ಪ್ರಾದೇಶಿಕ ವಿಭಿನ್ನತೆಯೆಂದರೆ ತಪ್ಪಾಗಲಾರದು. ಆದರೆ ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರು ಕೃಷಿಯತ್ತವಾಲುತ್ತಿರುವುದ್ದರಿಂದ ಕೃಷಿ ಪತ್ರಿಕೋದ್ಯಮದ ಬೆಳವಣಿಗೆಗೆ ಬೆಳಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಪ್ರವೀಣ ಕುಮಾರ.ಪಿ.ಪಿ. (2004). ಕೃಷಿ ಮತ್ತು ಪತ್ರಿಕೆಗಳು. ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
- ರಾಮಚಂದ್ರ. ಎಂ. (2005). ಕೃಷಿ ಮತ್ತು ವಿದ್ಯುನ್ಮಾನ ಮಾಧ್ಯಮಗಳು. ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ.
- ಸುರೇಶ್.ಡಿ. (2007). ಸುಜಾತ ಸಂಚಿಕೆಃ ಕೃಷಿ ಪತ್ರಿಕೋದ್ಯಮದಲ್ಲಿ ಒಂದು ಅಧ್ಯಯನ. ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
- ಸುರೇಶ್ ಕುಮಾರ. (2008). ಕನ್ನಡ ದಿನ ಪತ್ರಿಕೆಗಳಲ್ಲಿ ಕೃಷಿ ಸುದ್ದಿ ವಿಶ್ಲೇಷಣೆ: ಒಂದು ವಿಶ್ಲೇಣಾತ್ಮಕ ಅಧ್ಯಯನ, ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಸ್ವಾತಿ. ಎಸ್. (2009). ಕನ್ನಡ ಪತ್ರಿಕೆಗಳಲ್ಲಿ ಕೃಷಿ ವರದಿಗಾರಿಕೆ. ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
- ಉದಯಶಂಕರ ಭಟ್. ಕೆ. (1995). ಅಭಿವೃದ್ಧಿ ಸಂವಹನ ಮಾಧ್ಯಮವಾಗಿ ಅಡಿಕೆ ಪತ್ರಿಕೆ; ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.